# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 19.12.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಶ್ರೀ ಯಶವಂತ್ ಸಿ. ವಿ. | ಸಹಾಯಕ ಅಭಿಯಂತರರು, | ಸದಸ್ಯ ಕಾರ್ಯದರ್ಶಿ | ಹಾಜರಿದ್ದರು |
| 3 | ಡಾ॥ ಹರ್ಷಿತ್ ಬಿ. ಎಂ. | ಕೋವಿಡ್ ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. | ಸದಸ್ಯರು | ಹಾಜರಿದ್ದರು |
| 4 | ಡಾ॥ ಶ್ರೀನಿವಾಸ್ | ಕೋವಿಡ್ ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. | ಸದಸ್ಯರು | ಹಾಜರಿದ್ದರು |
| 5 | ಶ್ರೀಮತಿ ರೇಣುಕಾ | ಕಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 6 | ಶ್ರೀ ಗಂಗಾಧರ್ | ಕಂದಾಯ ಪರಿವೀಕ್ಷರು | ಸದಸ್ಯರು | ಹಾಜರಿದ್ದರು |
| 7 | ಶ್ರೀ ಚನ್ನೇಶಪ್ಪ | ಸ.ಅ., ಬಿಡಬ್ಲ್ಯೂಎಸ್ಎಸ್‌ಬಿ | ಸದಸ್ಯರು | ಹಾಜರಿದ್ದರು |
| 8 | ಶ್ರೀ ಅನಿಲ್ | ಸ.ಅ., ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 9 | ಶ್ರೀ ಪುನೀತ್ | ವಾರ್ಡ್ ಮಾರ್ಷಲ್ | ಸದಸ್ಯರು | ಹಾಜರಿದ್ದರು |
| 10 | ತಿರುಪಾಲ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 11 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 12 | ಜಾನ್ ಬಿ. | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>1) ಭಿಕ್ಷಾಟನೆ ಮಾಡುವವರು, ವಸತಿ ನಿರ್ಗತಿಕರನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ವರದಿ ನೀಡುವ ಬಗ್ಗೆ:-</u>

ನೋಡಲ್ ಅಧಿಕಾರಿಗಳು ಪ್ರಸ್ತಾಪಿತ ವಿಷಯದ ಬಗ್ಗೆ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಭಿಕ್ಷಾಟನೆ ಮಾಡುವವರು, ವಸತಿ ನಿರ್ಗತಿಕರನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ, ಸರ್ವೆ ಮಾಡಲು ಸಂಬಂಧಪಟ್ಟ ಇಂಜಿನಿಯರ್, ಆರೋಗ್ಯ ವಿಭಾಗ, ಕಂದಾಯ ವಿಭಾಗ, ಸಮಾಜ ಕಲ್ಯಾಣ ವಿಭಾಗ, ಪೋಲಿಸ್ ಇಲಾಖೆಯವರುಗಳೊಂದಿಗೆ ಸಮನ್ವಯ ಸಾಧಿಸಿ, ಜಂಟಿಯಾಗಿ ವರದಿ ಸಲ್ಲಿಸಬೇಕಾಗಿರುವುದರಿಂದ ಎಲ್ಲಾ ಇಲಾಖೆಯವರನ್ನೊಳಗೊಂಡಂತೆ ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಆ ಕೂಡಲೇ ಕಾರ್ಯರೂಪಕ್ಕೆ ತರುವುದಾಗಿ ಸಭೆಗೆ ತಿಳಿಸಿರುತ್ತಾರೆ.

<u>2) ಆರೋಗ್ಯ ಇಲಾಖೆ:-</u>

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೋವಿಡ್ ವ್ಯಾಕ್ಸಿನ್ ಸಂಗ್ರಹಣೆ ಮಾಡಲು ಸಕಲ ಸಿದ್ಧತೆಗಳು ಸಮರೋಪಾದಿಯಲ್ಲಿ ನಡೆಯುತ್ತಿದ್ದು, ಕೊರೊನಾ ವಾರಿಯರ್ಸ್‌ಗಳಿಗೆ ಹಾಗೂ ಹಿರಿಯ ನಾಗರೀಕರಿಗೆ ಚುಚ್ಚುಮದ್ದು ನೀಡಲು ಮೊದಲ ಆದ್ಯತೆಯಿದ್ದು, ಒಟ್ಟು 103 ಕೊರೋನಾ ವಾರಿಯರ್ಸ್‌ಗಳ ಪಟ್ಟಿಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರು ವೈದ್ಯಾಧಿಕಾರಿಗಳಿಗೆ ನೀಡಿರುತ್ತಾರೆ.

ವೈದ್ಯಾಧಿಕಾರಿಗಳು ಡಾ॥ ಹರ್ಷಿತ್‌ರವರು ಮಾತನಾಡಿ, ಗ್ರೂಪ್ ಡಿ ನೌಕರರಾದ ಜಾನಕಿ ಮತ್ತು ಶಿವಕುಮಾರ್‌ರವರಿಗೆ ಎರಡು ತಿಂಗಳ ವೇತನ ಹಾಗೂ ನರೇಶ್ ಮತ್ತು ಪವನ್‌ಗೆ ಮೂರು ತಿಂಗಳ ವೇತನವವನ್ನು ಪಾವತಿ ಮಾಡಿರುವುದಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಆರೋಗ್ಯಾಧಿಕಾರಿಗಳು, ಬಿಬಿಎಂಪಿರವರು ಕ್ರಮ ವಹಿಸಿರುವುದಿಲ್ಲ, ಆದ್ದರಿಂದ ಕೂಡಲೇ ವೇತನ ಮಾಡಲು ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರನ್ನು ಕೋರಿದರು.

ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಟಮಿನ್ ಸಿ ಹಾಗೂ ವಿಟಮಿನ್ ಡಿ 3 ಔಷಧಿಯ ಕೊರತೆಯಿದ್ದು, ಔಷಧಿಯನ್ನು ಪೂರೈಸಲು ಆರೋಗ್ಯ ಇಲಾಖೆ ಗಮನ ಕೊಡದೇ ಇರುವುದು ಕಂಡುಬಂದಿದ್ದು, ಕ್ರಮವಹಿಸಲು ಸೂಚಿಸಲಾಯಿತು.

ರೈಲ್ವೆ ನಿಲ್ದಾಣದ ಮುಂಭಾಗ ಪ್ರತಿ ದಿನ ಕೋವಿಡ್ ಟೆಸ್ಟ್ ಮಾಡಲು ರೈಲ್ವೆ ಇಲಾಖೆಯಿಂದ ಖಾಯಂ ಅನುಮತಿ ಪಡೆದಿರುವುದನ್ನು ಸಭೆಗೆ ತಿಳಿಸಲಾಯಿತು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೋವಿಡ್ ವೈದ್ಯರಿಗೆ ಪ್ರತಿ ಮಾಹೆಯ ಪೇ ಸ್ಲಿಪ್‌ಗಳನ್ನು ಹಾಗೂ ಗುರುತಿನ ಚೀಟಿಯನ್ನು ನೀಡಲು ಸಂಬಂಧಪಟ್ಟವರಿಗೆ ಸೂಚನೆ ನೀಡಲು ವೈದ್ಯಾಧಿಕಾರಿಗಳು ಅಧ್ಯಕ್ಷರಲ್ಲಿ ಕೋರಿದರು.

**3) ಪೌರ ಕಾರ್ಮಿಕರ ಬಗ್ಗೆ:**

ವಾರ್ಡ್‌ಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಪೇಸ್ಲಿಪ್‌ನ್ನು ನೀಡಲು, ಅವಶ್ಯವಿರುವ ಪೇಪರ್‌ನ್ನು ನೀಡದ್ದರೂ ಸಹ ಇಲ್ಲಿಯವರೆಗೂ ಪೇಸ್ಲಿಪ್‌ನ್ನು ನೀಡಿರುವುದಿಲ್ಲ ಎಂದು ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಕ್ರಮವಹಿಸಲು ಟಿಪ್ಪಣಿಯನ್ನು ಸಿದ್ಧಪಡಿಸಿ ಮಂಡಿಸಲು ಕಾರ್ಯದರ್ಶಿಯವರಿಗೆ ಸೂಚಿಸಿದರು.

ಪಾಲಿಕೆ ನೌಕರರಾದ ಮುರಳಿ, ಉದಯ್ ಕುಮಾರ್, ರಾಮು, ಅರುಣ್ ಕುಮಾರ್‌ರವರುಗಳಿಗೆ ಕ್ರೀಡಾ ಮೊತ್ತವನ್ನು ಎರಡು ವರ್ಷಗಳಿಂದ ಪಾವತಿಸಿರುವುದಿಲ್ಲವೆಂದು ಅಳಲು ತೋಡಿಕೊಂಡಿರುತ್ತಾರೆ. ಇದರ ಬಗ್ಗೆ ಅಧ್ಯಕ್ಷರು ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಆಶ್ವಾಸನೆ ನೀಡಿದರು.

**4) ಕಸದ ವಿಲೇವಾರಿ ಬಗ್ಗೆ:**

ಮಾರ್ಷಲ್ ಮಾತನಾಡಿ, ಕಸದ ವಿಲೇವಾರಿ ಮಾಡುತ್ತಿರುವ ಆಟೋ ಟಿಪ್ಪರ್‌ಗಳಲ್ಲಿ ಡ್ರೈವರ್‌ಗಳು ಮಾತ್ರ ಕಾರ್ಯನಿರ್ವಾಹಿಸುತ್ತಿರುತ್ತಾರೆ. ಕೆಲವು ಅಟೋ ಟಿಪ್ಪರ್‌ಗಳಲ್ಲಿ ಹೆಲ್ಪರ್‌ಗಳು ಇರುವುದಿಲ್ಲ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ, ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಇದರ ಬಗ್ಗೆ ಗುತ್ತಿಗೆದಾರರರೊಂದಿಗೆ ಮಾತನಾಡಿ ಸೂಕ್ತ ಕ್ರಮವಹಿಸಲು ಸೂಚಿಸಿದರು.

**5) ಕಂದಾಯ ಇಲಾಖೆ:**

ಕಂದಾಯ ಪರಿವೀಕ್ಷಕರು ಮಾತನಾಡಿ, ಇಲಾಖೆಯಿಂದ ಜಾರು ಮಾಡಲಾದ ನೋಟೀಸ್ ವಾರೆಂಟ್‌ಗಳಿಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ರೂ.11.00 ಲಕ್ಷಗಳ ಕಂದಾಯವನ್ನು ವಸೂಲಿ ಮಾಡಲಾಗಿದ್ದು, ಇನ್ನೂ ರೂ.94.00 ಲಕ್ಷಗಳ ಕಂದಾಯ ವಸೂಲಿ ಬಾಕಿ ಇದೆಯೆಂದು ಸಭೆಗೆ ಮಾಹಿತಿ ನೀಡಿದರು.

**6) ಬಿಡಬ್ಲ್ಯೂಎಸ್‌ಎಸ್‌ಬಿ :**

ಬಿ. ಕೆ. ನಗರದ 1ನೇ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ, ಬಿಡಬ್ಲ್ಯೂಎಸ್‌ಎಸ್‌ಬಿ ಬಾಕಿ ಉಳಸಿಕೊಂಡಿರುವ ಕೆಲಸಗಳಾದ ನೀರಿನ ಪೈಪ್‌ಲೈನ್ ಹಾಗೂ ಸ್ಯಾನಿಟರಿ ಲ್ಯಾಟರಲ್ ಲಿಂಕ್ ಅಳವಡಿಸುವ ಕೆಲಸವನ್ನು ಅತೀ ತುರ್ತಾಗಿ ಪೂರ್ಣಗೊಳಸಲು ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂಎಸ್‌ಎಸ್‌ಬಿ ಸಹಾಯಕ ಅಭಿಯಂತರರಿಗೆ ಅಧ್ಯಕ್ಷರು ತಿಳಸಿದರು.

**7) ಬೆಸ್ಕಾಂ ಇಲಾಖೆ:**

ಬಿ. ಕೆ. ನಗರದ 1ನೇ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ, ಬೆಸ್ಕಾಂ ಬಾಕಿ ಉಳಸಿಕೊಂಡಿರುವ ಹೆಚ್.ಟಿ. ಕೇಬಲ್ ಅಳವಡಿಸುವ ಕೆಲಸವನ್ನು ಅತೀ ತುರ್ತಾಗಿ ಪೂರ್ಣಗೊಳಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಹಾಯಕ ಅಭಿಯಂತರರಿಗೆ ಅಧ್ಯಕ್ಷರು ತಿಳಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

Yashavanth.C.V
**(ಯಶವಂತ್ ಸಿ. ವಿ.)**
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

**(ಎನ್. ಜಿ. ಉಮೇಶ್)**
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37